<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹುಣಸೂರು</u>

<u>ಸಿ.ಸಿ. ಸಂಖ್ಯೆ: 1001/2020</u>

ಫಿರ್ಯಾದಿದಾರರು: ಸರ್ಕಾರದ ಪರ ಅಬಕಾರಿ ಉಪ ನಿರೀಕ್ಷಕರು,
ಹುಣಸೂರು ವಲಯ, ಹುಣಸೂರು.

ವಿರುದ್ಧ,

ಆರೋಪಿ/ಗಳು

ಎ1. ವರುಣ್ ಕುಮಾರ್ ಬಿ.ಬಿ.
ಬಿನ್ ಬಿ. ಎಸ್. ಬಿದ್ದಪ್ಪ,
ವಯಸ್ಸು ವರ್ಷ,
ವಾಸ: ಉಡವೇಪುರ ಗ್ರಾಮದ ಗೇಟ್,
ಹನಗೋಡು ಹೋಬಳಿ,
ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

ಎ2. ಚಂದ್ರಮ್ಮ ಕೋಂ ತಿಮ್ಮಯ್ಯ,
ವಯಸ್ಸು ವರ್ಷ,
ವಾಸ: ಉಡವೇಪುರ ಗ್ರಾಮ,
ಹನಗೋಡು ಹೋಬಳಿ,
ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

<u>ದೋಷಾರೋಪಣೆ</u>

ಶ್ರೀ ಮನು ಪಟೇಲ್ ಬಿ.ವೈ., ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ:

1. ದಿ: 16.02.2019 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಉಡವೇಪುರ ಗ್ರಾಮದಲ್ಲಿ 1 ಮತ್ತು 2ನೇ ಆರೋಪಿಗಳಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶವುಳ್ಳವರಾಗಿ, 1ನೇ ಆರೋಪಿಯಾದ ನೀವು 2ನೇ ಆರೋಪಿರವರಿಗೆ ಸೇರಿದ ವಾಸದ ಮನೆಯ ಹಿಂದೆ ಪಂಪ್ ಸೆಟ್ ಒಳಗಿನ ಬಲ ಬಾಗಿಲಿನ ಹಿಂಭಾಗದಲ್ಲಿ 4 ರಟ್ಟಿನ ಪೆಟ್ಟಿಗೆಗಳಲ್ಲಿ ಒಟ್ಟು ಸುಮಾರು 34.560 ಲೀ. 90 ಎಂ.ಎಲ್. ಅಳತೆಯ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿ ಟೆಟ್ರಾಪ್ಯಾಕೆಟುಗಳನ್ನು, ತನ್ನ ಬಳಿ ಕರ್ನಾಟಕ ಅಬಕಾರಿ ಕಾಯ್ದೆ ಪ್ರಕಾರ ಯಾವುದೇ ರಹದಾರಿ ಇಲ್ಲದೇ ಸಾರ್ವಜನಿಕ ಸ್ಥಳದಲ್ಲಿ

ಮಧ್ಯವನ್ನು ಮಾರಾಟ ಮಾಡುತ್ತಿರುತ್ತೀರೆಂದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯಿದೆ ಕಲಂ 13 ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

2. ಎರಡನೇಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1ನೇ ಆರೋಪಿಯಾದ ನೀವು 2ನೇ ಆರೋಪಿರವರಿಗೆ ಸೇರಿದ ವಾಸದ ಮನೆಯ ಹಿಂದೆ ಪಂಪ್ ಸೆಟ್ ಒಳಗಿನ ಬಲ ಬಾಗಿಲಿನ ಹಿಂಭಾಗದಲ್ಲಿ 4 ರಟ್ಟಿನ ಪೆಟ್ಟಿಗೆಗಳಲ್ಲಿ ಒಟ್ಟು ಸುಮಾರು 34.560 ಲೀ. 90 ಎಂ.ಎಲ್. ಅಳತೆಯ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿ ಟೆಟ್ರಾಪ್ಯಾಕೆಟುಗಳನ್ನು, ತನ್ನ ಬಳಿ ಕರ್ನಾಟಕ ಅಬಕಾರಿ ಕಾಯ್ದೆ ಪ್ರಕಾರ ಸಮಾನ್ಯ ಪ್ರಮಾಣಕ್ಕಿಂತ ಅಧಿಕ ಪ್ರಮಾಣದಲ್ಲಿ ಸಂಗ್ರಹಿಸಿ ಇಟ್ಟುಕೊಂಡಿರುತ್ತೀರೆಂದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯಿದೆ ಕಲಂ 14 ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

3. ಮೂರನೇಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1ನೇ ಆರೋಪಿಯಾದ ನೀವು 2ನೇ ಆರೋಪಿರವರಿಗೆ ಸೇರಿದ ವಾಸದ ಮನೆಯ ಹಿಂದೆ ಪಂಪ್ ಸೆಟ್ ಒಳಗಿನ ಬಲ ಬಾಗಿಲಿನ ಹಿಂಭಾಗದಲ್ಲಿ 4 ರಟ್ಟಿನ ಪೆಟ್ಟಿಗೆಗಳಲ್ಲಿ ಒಟ್ಟು ಸುಮಾರು 34.560 ಲೀ. 90 ಎಂ.ಎಲ್. ಅಳತೆಯ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿ ಟೆಟ್ರಾಪ್ಯಾಕೆಟುಗಳನ್ನು, ಯಾವುದೇ ರಹದಾರಿ ಇಲ್ಲದೇ ಮತ್ತು ಅಧಿಕೃತ ಅಂಗಡಿಯ ಬಿಲ್ಲುಗಳು ಇಲ್ಲದೇ ತನ್ನ ಬಳಿ ಸಂಗ್ರಹಿಸಿ ಇಟ್ಟುಕೊಂಡಿರುತ್ತೀರೆಂದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯಿದೆ ಕಲಂ 32 ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

4. ಕೊನೇಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1ನೇ ಆರೋಪಿಯಾದ ನೀವು 2ನೇ ಆರೋಪಿರವರಿಗೆ ಸೇರಿದ ವಾಸದ ಮನೆಯ ಹಿಂದೆ ಪಂಪ್ ಸೆಟ್ ಒಳಗಿನ ಬಲ ಬಾಗಿಲಿನ ಹಿಂಭಾಗದಲ್ಲಿ 4 ರಟ್ಟಿನ ಪೆಟ್ಟಿಗೆಗಳಲ್ಲಿ ಒಟ್ಟು ಸುಮಾರು 34.560 ಲೀ. 90 ಎಂ.ಎಲ್. ಅಳತೆಯ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿ ಟೆಟ್ರಾಪ್ಯಾಕೆಟುಗಳನ್ನು, ಅಕ್ರಮವಾಗಿ ಮಾರಾಟ ಮಾಡುವ ಉದ್ದೇಶದಿಂದ ಸಾರ್ವಜನಿಕ ಸ್ಥಳದಲ್ಲಿ ಸಂಗ್ರಹಿಸಿ

ಇಟ್ಟುಕೊಂಡಿರುತ್ತೀರೆಂದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯಿದೆ ಕಲಂ 38(ಎ) ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

(ಮೇಲ್ಕಂಡ ಆರೋಪಣೆಯು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುತ್ತಿದ್ದು ಹಾಗೂ ಸದರಿ ಆರೋಪಣೆಗೆ ಆರೋಪಿಯಾದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.)

(ಮನು ಪಟೇಲ್ ಬಿ.ವೈ.)
ದಿನಾಂಕ: 28.12.2022 ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದಂ.ನ್ಯಾ.ದಂಡಾಧಿಕಾರಿಗಳು, ಹುಣಸೂರು.